**ಸಾಕ್ಷಿಯನ್ನು ದಿನಾಂಕಃ 07.11.2024 ರಂದು ಕರೆದು ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ ಃ ಶ್ರೀ ಎಂ.ಬಿ.ಹೆಚ್., ವಾದಿ ಪರ ವಕೀಲರಿಂದಃ**

**ನಾನು ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣಪತ್ರ ಸಲ್ಲಿಸಿದ್ದು ಅದರಲ್ಲಿ ಇರುವ ಅಂಶಗಳನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ ಮತ್ತು ಅದರಲ್ಲಿನ ಅಂಶಗಳು ಸತ್ಯವಾಗಿರುತ್ತವೆ. ಅದರಲ್ಲಿ ನನ್ನ ಸಹಿ ಇದೆ.**

ಸಾಕ್ಷಿಗೆ ಈಗಾಗಲೇ ಗುರುತಿಸಲ್ಪಟ್ಟಿರುವ ನಿ.ಪಿ. 3 ನ್ನು ತೋರಿಸಲಾಗಿ ಸಾಕ್ಷಿ ನಿ.ಪಿ.3 ರ ಅಸಲು ಪ್ರತಿ ತಾನೇ ತಯಾರಿಸಿದ್ದು ಎಂದು ನುಡಿದಿದ್ದು ಹಾಗೂ ನಿ.ಪಿ. 3 ತಾನು ತಯಾರಿಸಿದ ಅಸಲು ಪ್ರತಿಯ ದೃಡಿಕೃತ ಪ್ರತಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ನಿ.ಪಿ. 3 ರಲ್ಲಿ ನಮೂದಿಸಿದ ಸಂಗತಿ ಸರಿ ಇದೆ.

**ಪಾಟೀ ಸವಾಲುಃ ಶ್ರೀ ಎ.ಎಸ್.ವಾಯ್., ಪ್ರತಿವಾದಿ ಪರ ವಕೀಲರಿಂದಃ**

ದಿನಾಂಕಃ 21.07.2019 ರಂದು ದಾವಾ ಆಸ್ತಿಗಳಿಗೆ ಸಂಬಂದಿಸಿದಂತೆ ಮೋಜನಿ ಮಾಡಲು ಹೊಗಿದ್ದೆ, ಹದ್ದುಬಸ್ತು ಗುರುತಿಸುವ ಉದ್ದೇಶಕ್ಕೆ ಹೋಗಿದ್ದೆ. ಮೋಜನಿ ಮಾಡಿದ ನಂತರ ಬರೆದುಕೊಂಡ ವರದಿಯ ಪ್ರಕಾರ ಪಿಟಸಿಟ್ ಮತ್ತು ಅದರಲ್ಲಿನ ನಕಾಶೆಯನ್ನು ಯಾವ ದಿನಾಂಕದಂದು ಬರೆದು ತಯಾರಿಸಿದೆ ಎಂದು ನೆನಪಿಲ್ಲ.

ನಾನು ಕಿಶೋರಿ ಗ್ರಾಮದ ಸರ್ವೆ ನಂ.52 ಕ್ಕೆ ಸಂಬಂದಿಸಿದಂತೆ ಮೋಜನಿ ಮಾಡಲು ಹೋಗಿದ್ದೆ. ಸರ್ವೆ ನಂ.52 ರ ಎಲ್ಲಾ ಹಿಸ್ಸೆಗಳನ್ನು ನಾನು ಮೋಜನಿ ಮಾಡಿದ್ದೇನೆ.

ಸರ್ವೆ ನಂ.52 ರ ಚೆಕ್ಕಬಂಧಿ ನನಗೆ ಗೊತ್ತು, ಪೂರ್ವಕ್ಕೆ ಸರ್ವೆ ನಂ.51, ಪಶ್ಚಿಮಕ್ಕೆ ಮಂಟೂರ ಗಡಿ, ಉತ್ತರಕ್ಕೆ ಸರ್ವೆ ನಂ.49 ಹಾಗೂ ದಕ್ಷಿಣಕ್ಕೆ ಸರ್ವೆ ನಂ.53 ಈ ರೀತಿ ಚೆಕ್ಕಬಂದಿ ಇರುತ್ತದೆ.

ಈ ಚೆಕ್ಕಬಂದಿಗಳ ಬಗ್ಗೆ ನಾನು ನಿ.ಪಿ. 3 ರಲ್ಲಿ ನಮೂದಿಸಿರುತ್ತೇನೆ. ಸಾಕ್ಷಿ ನಿ.ಪಿ. 3 ನ್ನು ನೋಡಿ ತಾನು ಹೇಳಿದ ರೀತಿಯಲ್ಲಿ ಚೆಕ್ಕಬಂಧಿಯನ್ನು ಅದರಲ್ಲಿ ನಮೂದಿಸಲಾಗಿದೆ ಎಂದು ನೋಡಿ ನುಡಿದಿರುತ್ತಾರೆ.

ನಾನು ತಯಾರಿಸಿದ ವರದಿ ನಿ.ಪಿ.3 ರನ್ನು ಪ್ರಶ್ನಿಸಿ ಪ್ರತಿವಾದಿ ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಇರಬಹುದು. ಸದರಿ ಮೇಲ್ಮನವಿ ಇಂದಿಗೂ ಚಾಲ್ತಿ ಇದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ನೀಡಿದ ವರದಿ ತಪ್ಪು ಇದೆ ಎಂದು ಪ್ರತಿವಾದಿ ಮೇಲ್ಮನವಿ ಸಲ್ಲಿಸಿ ಅದರಲ್ಲಿ ನನ್ನ ವರದಿಗೆ ತಡೆಯಾಜ್ಞೆ ತಂದಿದ್ದಾರೆ ಎಂದರೆ ಸರಿ.

ಸರ್ವೆಯನ್ನು ನಾನು ಟೇಬಲ್ಲ ಮೊಜನಿ ಪದ್ಧತಿ ಅಳವಡಿಕೊಂಡು ಮಾಡಿರುತ್ತೇನೆ. ನಾನು

ಸರಿಯಾದ ಕ್ರಮಗಳನ್ನು ಪಾಲೀಸದೇ ತಪ್ಪು ರೀತಿಯಲ್ಲಿ ಮೋಜನಿ ಮಾಡಿ ಸುಳ್ಳು ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು

ಮುಧೋಳ.

ಸಾಕ್ಷಿಯ ಸಹಿ